ಸಿವಿಲ್ ಪ್ರೊಸಿಜ್ಯೂರ್ ಕೋಡಿನ 20ನೇ ಅಧ್ಯಾಯದ ನಿರೂಪಣೆಗಳ ಫಲವನ್ನು ಸದರೀ ಭೀಮರಾವು ಹೊಂದುವದಕ್ಕೆ ಹಕ್ಕು ದಾರನಾಗುವದರ ಮೂಲಕ ದಿವಾಳೀಯಾದವನೆಂದು ತೀರ್ಮಾನಿಸಲ್ಪಟ್ಟಿರುತ್ತದೆಯಾಗಿ ಸದರೀ ದಿವಾಳೀಯಾದವನ್ನು ನಿರ್ಬಂಧದಿಂದ ವಿಮೋಚನೇ ಮಾಡಿರುವದಲ್ಲದೇ ಇದಕ್ಕೆ ಲಗ್ಗತ್ತಾಗಿರುವ ಪಟ್ಟಿಯಲ್ಲಿ ಕಂಡ ಯಾವ ಸಾಲಕ್ಕೂ ಸ್ವತಂತ್ರವಾಗಿಯಾಗಲಿ ದಸ್ತಗಿರೀ ಮಾಡಲ್ಪಟ್ಟು ನಿರ್ಬಂಧಪಡುವ ಜವಾಬ್ದಾರಿಯಿಂದ ಸಹ ಅವನ್ನು ನಿಖಾಲಸ್ ಮಾಡಲಾಗಿರುತ್ತೆ ಯೆಂದು ಇದರಿಂದ ಹುಕ್ಕುಂ ಮಾಡಲ್ಪಟ್ಟಿರುತ್ತೆ.

ಸ್ರ್ 1887ನೇ ಇಸವಿ ಅಕ್ಟೋಬರ್ 1ನೇ ತಾರೀಖಿನಲ್ಲಿ ಈ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಸಿ ಕೊಡಲ್ಪಟ್ಟಿತು.

ಸೂಲದಪಟ್ಟಿ.

ನಂಬರ್.	ಲೇಣೇದಾರು ಅಥವಾ ದಾವಾದಾರ ಹೆಸರು ಮತ್ತು ವಿವರ ಮತ್ತು ಹಾಲೀ ತಿಳಿಯಬಂದ ಅವರುಗಳ ವಾಸಸ್ಥಳ.	ಹೊಣಲಗೆ.	ಯಾವಾಗ ದೇಣಿ ಕೊಟ್ಟದ್ದು.	ದೇಣಿಯ ಸ್ವಭಾವ ಮತ್ತು ಅದರ ಪ್ರತಿಫಲ ಮತ್ತು ಗಿರ್ವೀ ಯೇ ನಾದರೂ ಇದ್ದರೆ.	ಷರಾ.
1	ಚ್ಕಬಳ್ಳಾಪುರದಲ್ಲಿರುವ ದೇವಂಡಹಳ್ಳಿ ಬಸಪ್ಪರ ಚಿಕ್ಕಮುನಿಯಪ್ಪ	672 0 0	1885	ಡಿಕರೀ ಚಿಕ್ಕಬಳ್ಳಾಪುರದ ಮುನ್ಸಿಫ್ ಕೋರ್ಟು ಬಾಬತು ನಂಬರ 241.	
2	ಡಿಟೋ ಕನ್ನಪೆಟ್ಟೈಪ್ಪನವರ ಪುಟಂಣ ..	147 7 5	..	ಜಂದ್ರಪ್ಪಗೆ ಜಾಮೀನಾಗಿ ಕೊಡಿಸಿದ್ದು	
3	ಡಿಟೋ ಸ್ಟಾಂಪ್‌ವೆಂಡರ್ ಗೋವಿಂದಪ್ಪ ..	574 13 6	..	ಡಿಕ್ರೀ	
4	ಡಿಟೋ ಸುಬ್ರಹ್ಮಣ್ಯೇಶ್ವರ ಬ್ಯಾಂಕ್ ..	182 4 10	..	ಡಿಟೋ	
5	ಶಿಂಗೇರೀ ಕೊಪ್ಪದಲ್ಲಿ ಇರತಕ್ಕ ಇಂಜನಿಯರ್ ಇಲಾಖಾ ಓವರಸೀ ಸೂರ್ಯನಾರಾಯಣರಾವು ..	100 0 0	..	ಭೋಗ್ಯದಬಾಬತು	
6	ದೇವಂಡಪಳ್ಳಿ ತಾಲ್ಲೂಕು ಸರ್ವಮಾನ್ಯ ನಾರಾಯಣಪುರ ಪಟೇಲ್ ನಂಜೇಗೌಡಗೆ ..	50 0 0	..	ಡಿಟೋ	
	ಜುಮ್ಲಾ ..	1738 9 9			

ಸಿ. ಕೈಸ್,
ಸಬ್ ಜಡ್ಜ್.

ಫಾರೆಸ್ಟ್ ಇಲಾಖಾ.

ತಾರೀಖು 13ನೇ ಅಕ್ಟೋಬರ್ 1887.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, ದರಖಾಸ್ತು ಮಂಜೂರಾದ ತಾರೀಖು ಲಾಗಾಯಿತು 1889ನೇ ಇಸವಿ ಮಾರ್ಚೀ ಆಖೈರ್‌ವರಿಗೆ ಮೈಸೂರು ಡಿಸ್ಟ್ರಿಕ್ಟ್ ಹುಣಸೂರು ತಾಲ್ಲೂಕು ಬಾಬತು ಈ ಕೆಳಗೆ ನಮೂದಾಗುವ ಜಂಗಲ್‌ಗಳಿಂದ ಹುಣಸೂರ ಡಿಪೋಕ್ಕೆ ಚಿಲ್ಲರೇ ಚೌಬೀನೇ ಮತ್ತು ಗಳೂ ಸಹ ಹೇರಲು ಇಷ್ಟವುಳ್ಳವರು 1887ನೇ ಇಸವಿ ನವಂಬರ್ 15ನೇ ತಾರೀಖುವರಿಗೆ ಮೈಸೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಸೂಪರ್‌ಟೆಂಡೆಂಟ್ ಸಾಹೇಬರವರ ಆಫೀಸಿಗೆ ದರಖಾಸ್ತು ಮಾಡಬಹುದು.

ದರಖಾಸ್ತುದಾರ ತಾನು ಗಾಡೀ ಜೋಜಾ 1ಕ್ಕೆ ಯಾವ ದರದಂತೆ ಚಿಲ್ಲರೇ ಚೌಬೀನಾ ಮತ್ತು ಬಿದರುಗಳು ಹೇರಲು ಒಪ್ಪುತ್ತಾನೋ ಆ ದರವನ್ನ ದರಖಾಸ್ತಿನಲ್ಲಿ ನಮೂದಿಸಬೇಕು.

1 ವೀರನ ಹೊಸಹಳ್ಳಿ ಜಂಗಲ್
2 ಕಬಿನಹಳ್ಳಿ ಡಿಟೋ
3 ಆನೆಚವಕೂರು ಡಿಟೋ
4 ಬಾಣಾರೇ ಜಂಗಲ್
5 ಮಾವಕಲ್ ಡಿಟೋ

ಟಿ. ಆನಂದರಾವ್,
ಡೆಪ್ಯುಟಿ ಕಮ್ಮಿಷನರ್.

ಬೆಂಗಳೂರು ಡಿಸ್ಟ್ರಿಕ್ಟ್.

ತಾರೀಖು 3ನೇ ನವಂಬರ್ 188".

ಡಿಸ್ಟ್ರಿಕ್ಟ್ ಮುಜಕೂರ್ ಬೆಂಗಳೂರು ತಾಲ್ಲೂಕು ಮತ್ತು ಕ್ಲೋಸ್‌ಪೇಟೆ ಸಬ್ ರಜಿಸ್ಟ್ಯಾರ್ ಆಫೀಸುಗಳಲ್ಲಿ ಇದರ ಕೆಳಗೆ ನಮೂದಿಸಿರುವ ಭ್ಯವಾರಸ್ ದಸ್ತಾವೇಜುಗಳನ್ನು ಕ್ರಮಪ್ರಕಾರ ವಾರಸ್‌ದಾರ್‌ರಾಗಲಿ ಅಥವಾ ಅಧಿಕಾರ ಹೊಂದಿದ ಮುತಾಲೀಕನಾಗಲಿ ಈ ತಾರೀಖು ಲಾಗಾಯತು ಒಂದು ತಿಂಗಳೊಳಗಾಗಿ ಹಾಜರಾಗಿ ವಾಪಸ್ ಪಡಿಯಬೇಕು, ತಪ್ಪಿದಲ್ಲಿ ರೆಜಿಸ್ಟ್ರೇಷನ್ ಆಕ್ಟು 85ನೇ ಸೆಕ್ಷನ್ ಮೇರಿಗೆ ನಾಶ ಪಡಿಸಲ್ಪಡುತ್ತೆ.

ದಸ್ತಾವೇಜಿನ ನಂಬರ್ ಮತ್ತು ರಿಜಿಸ್ಟರ್ ಆಫಿಸ್ ಹೆಸರು.	ದಸ್ತಾವೇಜು ಬರದುಕೊಟ್ಟವರ ಹೆಸರು ಮತ್ತು ವಾಸಸ್ಥಾನ.	ದಸ್ತಾವೇಜು ಬರಸಿಕೊಂಡವರ ಹೆಸರು ಮತ್ತು ವಾಸಸ್ಥಾನ.	ರಿಜಿಸ್ಟರಿಗೆ ಹಾಜರಾದ ತಾರೀಖು.	ರಿಜಿಸ್ಟ್ರಾ ಆದ ತಾರೀಖು.	ದಸ್ತಾವೇಜಿನ ಸ್ವಭಾವ ಮತ್ತು ಕಿಮ್ಮತ್ತು.
ಬೆಂಗಳೂರು 1885—86 196	ಬೆಂಗಳೂರು ಮುದ್ದಪ್ಪನ ಪೇಟೇಯಲ್ಲಿ ಇರುವ ಗುಜೇ ಮಾರನಹಳ್ಳಿ ನಂಜಪ್ಪ	ಬೆಂಗಳೂರು ಬಕೆಟ್ಟು ಪೇಟೇಯಲ್ಲಿ ಇರುವ ಮಾತ್ಯಬಾಯಿ ಗುಂಡಪ್ಪ	1885ನೇ ಇ ಸವಿ ಮೇ ತಾ ರೀಖು 8	1885ನೇ ಇ ಸವಿ ಮೇ ತಾ ರೀಖು 8	ಬೆಂಗಳೂರು ಮುದ್ದಪ್ಪನ ಪೇಟೇಯಲ್ಲಿಇರುವ ಮ್ಯುನಿಸಿಪಲ್ ಬೋರ್ಡು 5ನೇ ನಂಬರ್ ಮನೆ 150 ರೂಪಾಯಿಗೆ ಭೋಗ್ಯ.
ಡಿಟೋ 356	ಬೆಂಗಳೂರು ತಾಲ್ಲೂಕು ಬೇಗೂರಿನಲ್ಲಿರುವ ಚಿನ್ನಪ್ಪ	ಡಿಟೋ ಬೆಂಗಳೂರಿನಲ್ಲಿರುವ ರಾಯಪ್ಪ	1885ನೇ ಜೂ|| 5	1885ನೇ ಜೂ|| 5	ಬೇಗೂರು ಗ್ರಾಮದ ಸರ್ವೇ 3ನೇ ನಂಬರ್ ಬಾಗಾಯತು ಜಮೀನು 50 ರೂಪಾಯಿಗೆ ಕ್ರಯ.
ಡಿಟೋ 529	ಬೆಂಗಳೂರು ರಾಣಾಪೇಟೆಯಲ್ಲಿರುವ ಅಬುದುಲ್ ಖುದ್ದೂಸ್ ಸಾಬಿಹೆಂಡತಿ ಹಯಾತ್‌ಬಿ	ಡಿಟೋ ಅಬ್ದುಲ್ ಖುದ್ದೂಸ್ ಸಾಬಿ	1885ನೇ ಜುಲೈ 3	1885ನೇ ಜುಲೈ 3	ಬೆಂಗಳೂರು ತಾಲ್ಲೂಕು ಗುಜದಹಳ್ಳಿ ಹೋಬಳಿ ಗ್ರಾಮದ ಬಳಿಯಣ ಜಮೀನುಗಳು 600 ರೂಪಾಯಿಗೆ ಕ್ರಯ ಮಾಡಿರುವಂತೆ.
ಡಿಟೋ 8.13	ಬೆಂಗಳೂರು ತಾ|| ಬಾಣಾವಾರದಲ್ಲಿಇರುವ ಮಹಮ್ಮದ್ ಮದಾರ್‌ಸಾಬಿ	ಡಿಟೋ ಬಾಣಾವಾರದಲ್ಲಿ ಇರುವ ಮುಳಗಿರಿಯಪ್ಪ, ಚಿನ್ನಪ್ಪ	1885ನೇ ಆಗಸ್ಟು 18	1885ನೇ ಆಗಸ್ಟು 18	ಬಾಣಾವಾರ ಗ್ರಾಮದ ಬಳಿ ಸರ್ವೇ 134ನೇ ನಂ. ಜೊಲವನ್ನ 70 ರೂಪಾಯಿಗಳಿಗೆ ಆಧಾರಮಾಡಿ ಇರುವಂತೆ.
ಕ್ಲೋಸ್‌ಪೇಟೆ 1884—85 ನಂ. 164	ನಾಗವಾರದಲ್ಲಿ ಇರುವ ವಕ್ಕಲಿಗರ ಕಬ್ಬೆ ಶಿದ್ದೇಗೌಡನ ಮಗ ಜೋರೆ	ಕಲಗೆರೇಲಿರುವ ನಾರಾಯಣಿಂಗರ ಮಗ ಚಂದ್ರಭರ್ಮಾಶಿಂಗ್	1885ನೇ ಮಾರ್ಚಿ 7	1885ನೇ ಮಾರ್ಚಿ 7	ನಾಗವಾರದ ಗ್ರಾಮದ ಖುಷ್ಕಿ 185ನೇ ನಂ. ಜಮೀನು ಸಾಲ್ 1ಕ್ಕೆ 9 ರೂಪಾಯಿ ಗುತ್ತಿಗೆ ವಾಯಿದೆ 3 ವರುಷ.
1885—86 ನಂಬರ್ 180	ತಿಂಗರಾಜಪುರದಲ್ಲಿಇರುವ ಕೃಷ್ಣಪ್ಪನ ಮಗ ರಾಮಯ್ಯ ವುರಫ್ ವೆಂಕಟರಾಮಯ್ಯ	ಕೋಡಿ ಹೊಸಹಳ್ಳಿಲಿರುವ ಶಿವಾಚಾರದ ಮಲ್ಲಿಕಾರ್ಜುನಯ್ಯನ ಮಗ ಮಲ್ಲಯ್ಯ	1885ನೇ ಇ ಸವಿ ಅಕ್ಟೋಬರ್ ತಾರೀಖು 2	1885ನೇ ಇಸವಿ ಅಕ್ಟೋಬರ್ ತಾರೀಖು 2	100 ರೂಪಾಯಿನ ಕುದ್ದ ಭೋಗ್ಯ ಪತ್ರ.
1885—86 2ನೇ ಬುಕ್ಕು ನಂಬರ್ 2	ಅಕ್ಕೂರು ಗ್ರಾಮದಲ್ಲಿ ಇರುವ ದಾಸೇಗೌಡನ ಮಗ ನೀಲೇಗೌಡ	ಅಕ್ಕೂರು ಗ್ರಾಮದಲ್ಲಿ ಇರುವ ನೀಲೇಗೌಡನ ಮಗ ದಾಸೇಗೌಡ	188೫ನೇ ಇ ಸವಿ ಮೇ 18	ಯಿಲ್ಲ	100 ರೂಪಾಯಿಗೆ ಖರೀದಿಪತ್ರ.

ಎ. ಹೆಚ್. ಮೆಕ್ಕ್ಯಾಟ್ಯೆರ್,
ರಜಿಸ್ಟ್ರಾರ್.